ಒರಲಿದೆ. ಎಲ್ಲಿಂದಲೂ ಪ್ರತಿಕ್ರಿಯೆ ಬರಲಿಲ್ಲ. 'ತಪಸ್ಸೂ... ಸ್ಸೂ... ಸ್ಸೂ...' ಎಂದು ದನಿಯೆತ್ತರಿಸಿ ಅಬ್ಬರಿಸಿದೆ. ಎಲ್ಲಿದ್ದನೋ ಏನೋ, 'ಸಾಬ್ ಜೀ... ಬುಲಾಯಾ ಆಪ್ ನೇ?' ಅನ್ನುತ್ತ, ಮರುಕ್ಷಣಕ್ಕೆಲ್ಲ ಮೈಮುದುಡಿಕೊಂಡು ಎದುರಾದ. ಅವನ ಕರ್‍ರನೆ ಹಣೆಯ ಭರ್ತಿ ಕೆಂಪೇ ಕೆಂಪಾಗಿ ಕಾಣುವ ದಪ್ಪನೆ ಕುಂಕುಮದ ತಿಲಕವಿತ್ತು.

'ಕಹಾ ಥಾ ರೇ?!'

'ಆಫೀಸಿನಲ್ಲಿ ಶಿವನ ಮೂರ್ತಿ ಇದೆಯಲ್ಲಾ, ಹೂವಿಡುತಾ ಇದ್ದೆ, ಸಾಬ್ ಜೀ... ಕುಛ್ ಚಾಹಿಯೇ?' ಬಲು ಅಮಾಯಕನಾಗಿ ಕೇಳಿದ. ಹುಲಿಯ ಗುಟುರಿಗೆ ಬೆದರಿದ ಹಸುವಿನಂತನ್ನಿಸಿದ.

ನನಗೆ ಮುಂದಿನ ಮಾತೇ ಹೊರಳಲಿಲ್ಲ. ಯಾಕೋ ಕಾಣೆ, ಕೊರಳುಕ್ಕಿ ಬಂತು. ಈವರೆಗೂ ಧುಮುಧುಮು ಧುಮ್ಮಿಕ್ಕುತ್ತಿದ್ದ ನನ್ನ ಹೆಂಡತಿಯೂ, ಈಗ ಇದ್ದಕ್ಕಿದ್ದಂತೆ ಸ್ಫುರಿಸಿಬಂದ ಕರುಣರಸವನ್ನೇ ಮೈವೆತ್ತಿಕೊಂಡು 'ಹೋಗಲಿ ಬಿಡರೀ... ಏನೂ ಮಾತಾಡೋದು ಬೇಡ!' ಅಂತಂದು, ಕುಳಿತಲ್ಲಿಂದ ಎದ್ದು ಹೋದಳು. ಅಳುವೆಲ್ಲ ಆನಂದಬಾಷ್ಪವಾಯಿತೋ ಅಂತನ್ನಿಸಿತು!

ತಪಸ್ಸು ನನ್ನನ್ನೇ ತದೇಕ ನೋಡಿಕೊಂಡು, 'ಕ್ಯಾ ಹುವಾ, ಸಾಬ್ ಜೀ?' ಎಂದು ಕಕ್ಕಾವಿಕ್ಕಿ ತಾಳಿ ನಿಂತ. 'ಏನೂ ಇಲ್ಲವೋ!' ಅಂತಂದೆ. 'ಏನಾದರೂ ತಪ್ಪು ಮಾಡಿದ್ದರೆ ಬೈದು ಬಿಡಿ, ಸಾಬ್ ಜೀ... ನೀವು ನನಗೆ ಮಾಲೀಕರಲ್ಲವಾ?' ಅಂತಂದ. ಹಿಂದೆಯೇ ಶಿರಸಾಷ್ಟಾಂಗ ಬಗ್ಗಿ, ನನ್ನೆರಡೂ ಪಾದಗಳನ್ನು ತನ್ನ ಅಂಗೈಗಳಿಂದ ಕವಿದು, ತನ್ನ ಹಣೆಯನ್ನು ನನ್ನ ಮೊಣಕಾಲಿನ ಅಡಿಗೆ ತಾಕಿಸಿದ. 'ಅರರೇ... ಏನೋ ಮಾಡುತಿದೀಯೋ ನೀನು?!' ಹಿಮ್ಮೆಟ್ಟಿದೆ. ಕಾಲುಗಳನ್ನು ಅವನ ಕೈಗಳಾಚೆ ಹೊರಳಿಸಿ ಕೊಸರುವುದು ತುಸು ಕಷ್ಟವೇ ಆಯಿತು.

'ಮಾಲೀಕ್ ಭಗವಾನ್ ಹೋತಾ ಹೇ, ಸಾಬ್ ಜೀ...' ಅಂತಂದ. ಯಜಮಾನನು ದೇವರ ಪ್ರತಿರೂಪವೆಂದು ಆಡಿದ ಇಪ್ಪತ್ತರ ಪೋರನ ನಂಬಿಕೆಯನ್ನು ಅಲ್ಲಗಳೆಯುವುದು ಹೇಗೆ? ತೋಚಲಿಲ್ಲ. ಇದ್ದಕ್ಕಿದ್ದಂತೆ ನನ್ನ ಕೋಪತಾಪಾದಿ ಭರ್ತ್ಸನೆಯಷ್ಟೂ ಸೋತು ನೆಲ ಸೇರಿದವು!

ಇಂತಹ ತಪಸ್ಸು ದಿನಗಳೆದಂತೆ ನಮ್ಮೊಳಗೆ ತಾನಾಗಿ ಬೆರೆತುಹೋದ. ಎಂಬತ್ತು ವಯಸ್ಸಿನ ನನ್ನ ಅಮ್ಮನಿಗೆ ಕಣ್ಮಣಿಯಂತಾಗಿಬಿಟ್ಟ. ಅವಳ ಮುಪ್ಪು ತಪ್ಪಿಸುವ ಹೆಜ್ಜೆಗಳನ್ನು ತಿದ್ದುವ ಹಾಗೆ ಸದಾ ಜೊತೆಗಿದ್ದು ಖುದ್ದು ಊರುಗೋಲಾಗಿಬಿಟ್ಟ. ಅವಳನ್ನು ಮನೆಯ ಎದುರಿಗಿರುವ ದೇವಸ್ಥಾನಕ್ಕೆ ಕೊಂಡೊಯ್ಯುವ ಮತ್ತು ವಾಪಸು ತರುವ ಕೆಲಸವನ್ನು ತಪಸ್ಸೆನ್ನುವ ಹಾಗೆ ಕೈಕೊಂಡ! ಇದನ್ನು ನೋಡುವಾಗಲೆಲ್ಲ ನನ್ನ ಕಣ್ಣು ತೇವಗೊಳ್ಳುವವು. ಮಗನಾದ ನಾನು ಮಾಡಬೇಕಾದ್ದನ್ನು ಯಾರದೋ ಮಗನಾದ ಇವನು ಮಾಡುವನಲ್ಲ... ಎಂದೆಲ್ಲ ಕೃತಜ್ಞತೆಯ ಪಸೆಯು ಕಣ್ಣಡರಿ ತುಂಬುವುದು. ನೋಟ ಮಸುಕುವುದು. ಇಷ್ಟಿದ್ದೂ, ಈ ಪರಿಯ ನಂಟಾದರೂ ಎಷ್ಟು ದಿನದ್ದು? ದುಡ್ಡಿಗೆ ಕೊಂಡ ಬೆಂಬಲವು ದುಡ್ಡಿನ ಕಿಮ್ಮತ್ತಿರುವವರೆಗೆ ತಾನೇ ಅನ್ನಿಸಿ, ಮನಸ್ಸು ಲೌಕಿಕಕ್ಕಿಳಿದು ಹೋರಾಡುವುದು.

ಇನ್ನು, ನನ್ನ ಹೆಂಡತಿಯೂ ಮಾತುಮಾತಿಗೂ ತಪಸ್ಸನ್ನು ನೆನೆಯುವಳು. ದಿನವೂ ಬೆಳಬೆಳಗ್ಗೆಯೇ ಎದ್ದು, ಮಿಂದು ಮಡಿಯಾಗಿ, ದೇವರಮನೆ ಹೊಕ್ಕು, ಕಡುಲೋಹದ ದೈವಗಳೆದುರು ದೀಪದ ಬೆಳಕಿಟ್ಟ ಮೇಲಷ್ಟೇ, ಉಳಿದ ದೈನಂದಿನದಲ್ಲಿ ತೊಡಗುವಳು. ತಪಸ್ಸಾದರೂ, ಮುಂಜಾನೆಗೆ ಮೊದಲೇ ಎದ್ದು, ಇಡೀ ಬಡಾವಣೆಯೊಳಗೊಮ್ಮೆ ನಾಲ್ಕಾರು